(SRI K. HANUMANTHAIYA.)

governs service conditions of Government employees, Article 305 reads: "An officer in superior service, who has attained the age of fifty-five years, may be required to retire, unless Government considers him efficient, and permits him to remain in the service. But as the premature retirement of an efficient officer imposes a needless charge on the State, this rule should be worked with discretion. And in cases in which the rule is enforced, a statement of the reasons for enforcing it shall be placed on record." In accordance with this rule we sometimes extend and sometimes re-employ the services of retired officers.

Sri K. PUTTASWAMY.—Does not Article 320 (b) of the Constitution of India over-ride that and make it obligatory on the Government to consult the Public Service Commission when re-employing retired officers?

Sri K. HANUMANTHAIYA.—As the Hon'ble Member knows, rules in regard to the Public Service Commission have not been framed. So, the old practice, and rules which were being followed by the Mysore Government are still adhered to.

Sri K. PUTTASWAMY.—When will the Public Service Commission rules be framed, Sir?

Mr. SPEAKER.—That was answered last week to a definite question.

ಶ್ರೀ ಎಂ. ಮಾದಯ್ಯ.—Superannuation age ಗೊತ್ತುಮಾಡಿದ್ದಾರೆ, ಇದನ್ನು ಜಾಸ್ತಿಮಾಡಬೇಕೆಂದು ಸರ್ಕಾರದವರು ಯೋಚನೆಮಾಡಿದ್ದಾರೆಯೆ?

ಶ್ರೀ ಕೆ. ಹನುಮಂತಯ್ಯ.—ಇಂಡಿಯಾ ಸರ್ಕಾರದವರು 55 ವರ್ಷದಿಂದ 58 ವರ್ಷದವರೆಗೆ ಹೆಚ್ಚಿಸಬಹುದೆ ಎಂಬ ವಿಷಯದಲ್ಲಿ ಸಮಾಲೋಚನೆ ನಡೆಸುತ್ತಿದ್ದಾರೆ.

ಶ್ರೀ ಎಂ. ಮಾದಯ್ಯ.—ಈ ವಿಚಾರದಲ್ಲಿ ಸಂಸ್ಥಾನದ ಸರ್ಕಾರದ ಅಭಿಪ್ರಾಯ ಕೇಳಿದ್ದಾರೆಯೆ?

ಶ್ರೀ ಕೆ. ಹನುಮಂತಯ್ಯ.—ಕೇಳಿದ್ದಾರೆ, ಇನ್ನೂ ಉತ್ತರ ಕೊಡುವುದರಲ್ಲಿದ್ದೇವೆ.

ಶ್ರೀ ಎಂ. ಮಾದಯ್ಯ.—ಇದು ಸೂಕ್ತವೆಂದು ಅಭಿಪ್ರಾಯಪಡುತ್ತಾರೆಯೆ ನಮ್ಮ ಸರ್ಕಾರದವರು?

ಶ್ರೀ ಕೆ. ಹನುಮಂತಯ್ಯ.—ಈ ವಿಷಯವನ್ನು ಮಂತ್ರಿಮಂಡಲದ ಮುಂದಿಟ್ಟಿದೆ, ಇನ್ನೂ ಯಾವ ತೀರ್ಮಾನಕ್ಕೂ ಬಂದಿಲ್ಲ.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಈಗ ತಾವು ಓದಿದ ನಿಬಂಧನೆ ಅಧಿಕಾರಿಗಳನ್ನು ರಿಟೈರ್ ಮಾಡುವುದಕ್ಕಿಂತ ಮುಂಚೆ ಅನ್ವಯಿಸುತ್ತದೆಯೋ ಅಥವಾ ರಿಟೈರ್ ಆದ ಮೇಲೊ?

ಶ್ರೀ ಕೆ. ಹನುಮಂತಯ್ಯ.—ರಿಟೈರ್ ಆದ ಮೇಲೆ ಅಧಿಕಾರವಿಲ್ಲ, ಇದು ಎಕ್ಸ್‌ಟೆಷನ್ನಿಗೆ ಮಾತ್ರ ಅನ್ವಯಿಸುತ್ತದೆ. The forms may differ but the substance is the same.

ಶ್ರೀ ಟಿ. ಹನುಮಯ್ಯ.—31 ಜನ ಅಧಿಕಾರಿಗಳನ್ನು 'ರೀ ಎಂಪ್ಲಾಯ್' ಮಾಡಿದ್ದೀರಿ, ಹೀಗೆ ಮಾಡಬೇಕೆಂದು ಅವರು ಅರ್ಜಿ ಹಾಕಿಕೊಂಡರೊ ಅಥವಾ ಸರ್ಕಾರದವರೇ ಮಾಡಿದರೊ!

ಶ್ರೀ ಕೆ. ಹನುಮಂತಯ್ಯ.—ಸರ್ಕಾರಿ ಅಧಿಕಾರಿಗಳು ನವಂಗೆ 'ಎಕ್ಸ್‌ಟೆಷನ್' ಕೊಡಿ ಎಂದು ಅರ್ಜಿ ಹಾಕಿಕೊಳ್ಳುವ ಸೌಜನ್ಯರಹಿತವಾದ ಮಾರ್ಗವನ್ನು ಇನ್ನೂ ಹಿಡಿದಿಲ್ಲ.

ಶ್ರೀ ಟಿ. ಹನುಮಯ್ಯ.—ಸರ್ಕಾರದವರೇ ಕೊಟ್ಟಿದ್ದಾರೆಯೆ?

ಶ್ರೀ ಕೆ. ಹನುಮಂತಯ್ಯ.—ಅದೇ ಅರ್ಥವಾಗುತ್ತದೆ.

ಶ್ರೀ ಟಿ. ಹನುಮಯ್ಯ.—ಇವರು ಬಹಳ efficient ಆಗಿದ್ದಾರೆಂದು ಅವರಿಗೆ ತಾವು extension ಕೊಟ್ಟಿದ್ದೀರೋ?

ಶ್ರೀ ಕೆ. ಹನುಮಂತಯ್ಯ.—ಹೌದು.

ಶ್ರೀ ಟಿ. ಹನುಮಯ್ಯ.—ಹಾಗಾದರೆ ಇತರರೆಲ್ಲ inefficient ಎಂದು ತಾವು ಭಾವಿಸಿದ್ದೀರಾ?

Sri K. HANUMANTHAIYA.—It is an inference; it is not a question for information.

---

9 A.M.

Officers retired between January 1951 and February 1953.

Q.—370. Sri P. R. RAMAIYA (Basavangudi).—

Will the Government be pleased to state:—

(*a*) how many Government officers were retired between January 1951 and February 1953 after reaching the age of superannuation;

(*b*) how many officers were given extension of service even after superannuation during the period from January 1951 to February 1953;

(*c*) how many officers were retired before superannuation between January 1951 and February 1953 and for what reasons?

A.—Sri K. HANUMANTHAIYA (Chief Minister).—

(*a*) One hundred and eight.

(*b*) Thirty-six (including 15 cases of officers whose continuance in service beyond the date of superannuation calculated with reference to a newly accepted date of birth was deemed to be extension of service).

(*c*) Sixteen.

On charges of corruption, misconduct, etc.;

On medical grounds;

On applications from the officers themselves, and under the provisions of the Mysore Services Regulations.

ಶ್ರೀ ಪಿ. ಆರ್. ರಾಮಯ್ಯ.—ತಾವು ಪ್ರಶ್ನೆಗೆ ಒದಗಿಸಿರುವ ಉತ್ತರದ ಪ್ರಕಾರ ಅವರು ಹುಟ್ಟಿದ ತಾರೀಖನ್ನು ತಾವು ಯಾವ ನೀತಿ ನಿಯಮಗಳ ಮೇಲೆ ಅಂಗೀಕಾರ ಮಾಡಿದ್ದೀರಿ?

ಶ್ರೀ ಕೆ. ಹನುಮಂತಯ್ಯ.—ಈಗ್ಯೆ ಕೆಲವು ವರ್ಷಗಳ ಹಿಂದೆ ಸರ್ಕಾರಿ ನೌಕರರ ಮತ್ತು ಅಧಿಕಾರಿಗಳ ಹುಟ್ಟಿದ ತಾರೀಖಿನ ಬಗ್ಗೆ ಒಂದು ಜಿಜ್ಞಾಸೆ ಹುಟ್ಟಿದುದರಿಂದ ಈ ಎಲ್ಲ ಅಧಿಕಾರಿಗಳೂ ಮತ್ತು ಹೊಸದಾಗಿ ಇತ್ತೀಚೆಗೆ ಸೇರಿದಂತಹವರೂ ಅವರು ಕೆಲಸಕ್ಕೆ ಸೇರುವಾಗ ಯಾವ ಹುಟ್ಟಿದ ತಾರೀಖನ್ನು ಕೊಟ್ಟಿದ್ದಾರೆ, ಆ ಬಗ್ಗೆ ಸರ್ವಿಸ್ ರಿಜಿಸ್ಟರಿನಲ್ಲಿ ಏನು ದಾಖಲೆ ಹಾಕಿರುತ್ತದೆಂಬುದನ್ನು ನೋಡಿಕೊಂಡು, ಅವರು ಅಭ್ಯಾಸ ಮಾಡಿದ ಸ್ಕೂಲು ಕಾಲೇಜುಗಳಿಗೆ ಸೇರತಕ್ಕ ಕಾಲದಲ್ಲಿ ಈ ಹುಟ್ಟಿದ ತಾರೀಖಿನ ಬಗ್ಗೆ ಅಲ್ಲಿ ಏನು ದಾಖಲೆಯಾಗಿರುತ್ತೆಂಬುದನ್ನು ನೋಡಿಕೊಂಡು, ಹೀಗೆ ಇನ್ನೂ ಇರತಕ್ಕ ನಾಲ್ಕಾರು ಸಂದರ್ಭಗಳನ್ನೆಲ್ಲಾ ನೋಡಿಕೊಂಡು ಅವುಗಳ ಪೈಕಿ ಯಾವುದು ಸರಿಯೆಂದು ಕಂಡು ಬರುತ್ತದೆಯೋ ಅಂಥದ್ದನ್ನೂ ಅಂಗೀಕಾರ ಮಾಡಲಾಗುತ್ತದೆ.

ಶ್ರೀ ಪಿ. ಆರ್. ರಾಮಯ್ಯ.—36ರಲ್ಲಿ ಈ 15 ಜನರು ಹೋಗುತ್ತಾ, ಇನ್ನುಳಿಯುವ 21 ಜನರಿಗೆ ತಾವು ಯಾವ ಆಧಾರದ ಮೇಲೆ ಸರ್ವೀಸ್ ಬಡಾವಣೆ ಮಾಡಿದಿರಿ?

ಶ್ರೀ ಕೆ. ಹನುಮಂತಯ್ಯ.—ಅದಕ್ಕೆ ಆಗಲೇ ಉತ್ತರ ಕೊಡಲಾಗಿದೆ.

ಶ್ರೀ ಪಿ. ಆರ್. ರಾಮಯ್ಯ.—ತಾವು ಇಲ್ಲಿ ತಿಳಿಸಿರತಕ್ಕ 16ಜನರ ಪೈಕಿ ಎಷ್ಟು ಜನರನ್ನು Corruption and misconduct ತಕ್ಸೀರಿಗಾಗಿ ರಿಟೈರ್‌ಮಾಡಿದ್ದೀರಿ?

Sri K. HANUMANTHAIYA.—I will furnish the information presently.

ಶ್ರೀ ಪಿ. ಆರ್. ರಾಮಯ್ಯ.—ಎಷ್ಟು ಜನರನ್ನು ಮೆಡಿಕಲ್ ಗ್ರೌಂಡ್ಸಿನ ಮೇಲೆ ರಿಟೈರ್ ಮಾಡಿದ್ದೀರಿ?

ಶ್ರೀ ಕೆ. ಹನುಮಂತಯ್ಯ.—ಪ್ರತಿಯೊಂದಕ್ಕೂ ತಾವು ಬೇರೆ ಬೇರೆಯಾಗಿ ಪ್ರಶ್ನೆ ಕೇಳಿ, ಆಗ ನಾನು ಉತ್ತರ ಕೊಡುತ್ತೇನೆ. ಈಗ ಅದನ್ನೆಲ್ಲಾ ಹೇಳುವುದಕ್ಕೆ ಆಗುವುದಿಲ್ಲ.

ಶ್ರೀ ಪಿ. ಆರ್. ರಾಮಯ್ಯ.—ಈ Corruption and misconduct ತಕ್ಸೀರಿನ ಬಗ್ಗೆ ರಿಟೈರ್ ಆಗಿರತಕ್ಕವರು ಯಾರಲ್ಲಿ ಅಪೀಲ್ ಹೋಗಬೇಕು. ಈ ತರಹೆಯ ಕೇಸುಗಳನ್ನು ಆಖೈರಾಗಿ ತೀರ್ಮಾನ ಮಾಡತಕ್ಕವರು ಯಾರು, ಈ ಸಂಬಂಧದಲ್ಲಿ ಜ್ಯುಡಿಷಿಯಲ್ ವಿಚಾರಣೆಯೇನಾದರೂ ಇದೆಯೇ, ಇಲ್ಲವೇ ಅಥವಾ ಸರ್ಕಾರದವರೇ ಆಖೈರು ತೀರ್ಮಾನ ಮಾಡುತ್ತಾರೋ?

ಶ್ರೀ ಕೆ. ಹನುಮಂತಯ್ಯ.—Corruption ಮತ್ತು misconduct ಬಗ್ಗೆ ದೂರುಗಳು ಬಂದಿದ್ದರೆ ಆ ದೂರುಗಳನ್ನು ಆಂಟಿಕರಪ್ಷನ್ ಡೈರೆಕ್ಟರವರು ತನಿಖೆ ನಡೆಸಿ, ಸರ್ಕಾರಕ್ಕೆ, ಅವರ ಶಿಫಾರ್ಸಿನೊಂದಿಗೆ, ವರದಿಯನ್ನು ಕಳುಹಿಸುತ್ತಾರೆ. ಇನ್ನುಳಿದ ಸಂದರ್ಭಗಳಲ್ಲಿ ಸೂಕ್ತ ಕಂಡುಬರುವಂಥವುಗಳನ್ನು ತೀರ್ಮಾನಮಾಡಲು ಪಬ್ಲಿಕ್ ಸರ್ವಿಸ್ ಕಮಿಷನ್ನಿನ ಸಲಹೆ ಕೇಳುತ್ತೇವೆ. ಅಂತೂ ಕೊನೆಯ ತೀರ್ಮಾನ ಮಂತ್ರಿಮಂಡಲಕ್ಕೆ ಸೇರಿರತಕ್ಕದ್ದಾಗಿದೆ.

ಶ್ರೀ ಪಿ. ಆರ್. ರಾಮಯ್ಯ.—ಕರಪ್ಷನ್ ಥಾರ್ಜುಗಳ ಮೇರೆ ರಿಟೈರ್ ಮಾಡಿಸುವಾಗ ಜುಡಿಷಿಯಲ್ ತೀರ್ಮಾನಕ್ಕೆ ಅವುಗಳನ್ನು ಬಿಡತಕ್ಕುದು ಉಚಿತವೆಂಬುದಾಗಿ ಯಾರಾದರೂ ಅಧಿಕಾರಿಗಳು ತಮಗೆ ತಿಳಿಸಿದ್ದಾರೆಯೇ?

Sri K. HANUMANTHAIYA.—Sir, if it is a judicial enquiry it is going to be litigious, costly, prolonged and ruinous to the applicant himself.

ಶ್ರೀ ಪಿ. ಆರ್. ರಾಮಯ್ಯ.—ಇಂಥಾ ಸಂದರ್ಭಗಳಲ್ಲಿ ಜುಡಿಷಿಯಲ್ enquiry ಮಾಡುವ ಪದ್ಧತಿ ಇತರ ಕಡೆ ಇಲ್ಲವೇ?

Sri K. HANUMANTHAIYA.—I am not aware of it. If the Hon'ble Member gives any information, I will gladly take it.

ಶ್ರೀ ಪಿ. ಆರ್. ರಾಮಯ್ಯ.—ಕೇಂದ್ರ ಸರ್ಕಾರವು ಶ್ರೀ ವೆಂಕಟರಾಮ್ ಅವರ ವಿಚಾರದಲ್ಲಿ ಜುಡಿಷಿಯಲ್ enquiry ಮಾಡುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ!

Mr. SPEAKER.—The Hon'ble Chief Minister need not answer. It is not relevant.

ಶ್ರೀ ಪಿ.ಆರ್. ರಾಮಯ್ಯ,—On applications from the officers themselvesಗೆ ಎಂದು ಹೇಳೋಣವಾಗಿದೆ. ಯಾರು ಸ್ವಾಮಿ ಅವರು, ಅಪ್ಲೈ ಮಾಡಿಕೊಂಡಿರುವವರು?

Sri K. HANUMANTHAIYA.—I will furnish that information also presently.

ಶ್ರೀ ಟಿ. ಎಸ್. ಮೂಡಲಗಿರಿ ಗೌಡ.—ಜುಡಿಷಿಯಲ್ ಇಲಾಖೆಯ ಅಧಿಕಾರಿಗಳ ವಿಚಾರದಲ್ಲಿ ಹುಟ್ಟಿದ ತಾರೀಖನ್ನು ಯಾವ ರೀತಿ ಅಂಗೀಕಾರ ಮಾಡುತ್ತಿದ್ದೀರಿ?

ಶ್ರೀ ಕೆ. ಹನುಮಂತಯ್ಯ.—ಮಿಕ್ಕ ಎಲ್ಲಾ ಇಲಾಖೆಗಳ ಅಧಿಕಾರಿಗಳ ಹುಟ್ಟಿದ ತಾರೀಖನ್ನು ತೀರ್ಮಾನಿಸಲು ಯಾವ ನೀತಿಯನ್ನು ಅನುಸರಿಸಲಾಗುತ್ತದೆಯೋ ಅದೇ ನೀತಿಯನ್ನು ಇವರಿಗೂ ಅನ್ವಯಿಸಲಾಗುತ್ತದೆ.

ಶ್ರೀ ಟಿ. ಎಸ್. ಮೂಡಲಗಿರಿ ಗೌಡ.—ಹೈಕೋರ್ಟು ಜಡ್ಜಿಗಳು ಅವರು ಹುಟ್ಟಿದ ತಾರೀಖನ್ನು ತಪ್ಪಾಗಿ ಕೊಟ್ಟಿರುವುದು ಅಥವಾ ಸರಿಯಾಗಿ ಕೊಡದೆ ಇರುವಂಥಾ ವಿಚಾರಗಳು ಏನಾದರೂ ತಮ್ಮ ಗಮನಕ್ಕೆ ಬಂದಿವೆಯೇ?

ಶ್ರೀ ಕೆ. ಹನುಮಂತಯ್ಯ.—ಅಂಥ ವಿಷಯಗಳು ಯಾವುವೂ ನಮ್ಮ ಅವಗಾಹನೆಗೆ ಬಂದಿಲ್ಲ.

ಶ್ರೀ ವಿ. ಆರ್. ನಾಯ್ಡು.—ಡಿಸ್ಟ್ರಿಕ್ಟ್ ಬೋರ್ಡ್ ಮತ್ತು ಮುನಿಸಿಪಾಲಟಿ, ಕಾರ್ಪೊರೇಷನ್ ಇಂಥಾ ಸಂಸ್ಥೆಗಳಲ್ಲಿ ಕೆಲಸಮಾಡತಕ್ಕ ಸದಸ್ಯರು ಚುನಾವಣೆಗೆ ನಿಲ್ಲಬೇಕಾಗಿದರೆ ಅವರ ವಯಸ್ಸು 55 ವರ್ಷಕ್ಕೆ ಮೀರಿರಬಾರದೆಂದು ಒಂದು ಕಾನೂನು ತರುತ್ತಾರೆಂದು ಕೇಳುತ್ತೇನೆ. ಇದು ನಿಜವೇ ?

ಶ್ರೀ ಕೆ. ಹನುಮಂತಯ್ಯ.—ತಾವು ಒಂದು ಪ್ರತ್ಯೇಕ್ ಮಸೂದೆಯನ್ನು ತಂದರೆ ಆಲೋಚನೆ ಮಾಡೋಣ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಲಂಚನಿರೋಧ ಇಲಾಖೆಯವರು ಲಂಚನಿರೋಧ ಕೇಸುಗಳ ಬಗ್ಗೆ ಅವರನ್ನು ಕೆಲಸದಿಂದ ನಿವೃತ್ತಿ ಮಾಡಬೇಕೆಂದು ಸರ್ಕಾರಕ್ಕೆ ಶಿಫಾರ್ಸ್ ಮಾಡಿದ್ದರೆ ಸರ್ಕಾರದವರು ಅವರಿಗೆ ಬರೀ ನೂರು ರೂಪಾಯಿ ಜುಲ್ಮಾನೆಗಳನ್ನು ಹಾಕಬಹುದೇ ?

ಶ್ರೀ ಕೆ. ಹನುಮಂತಯ್ಯ.—ಕೆಲವು ಸಂದರ್ಭಗಳಲ್ಲಿ ಲಂಚ ನಿರೋಧ ಇಲಾಖೆಯವರು ಕೊಡತಕ್ಕ ಶಿಫಾರ್ಸನ್ನು ಒಪ್ಪಿಕೊಳ್ಳಲಾಗುತ್ತದೆ. ಕೆಲವು ಸಂದರ್ಭಗಳಲ್ಲಿ ಅವರು ಕೊಡಬೇಕೆಂದು ಸೂಚಿಸತಕ್ಕ ಶಿಕ್ಷೆಗಳು ಉಗ್ರವಾಗಿರುತ್ತವೆಯೆಂದು ಸರ್ಕಾರದವರಿಗೆ ಕಂಡು ಬಂದರೆ ಮತ್ತು ಅಂತಹ ಶಿಕ್ಷೆಗೆ ಒಳಗಾಗತಕ್ಕ ನೌಕರನು 25–30 ವರ್ಷ ಸರ್ವಿಸ್ ಮಾಡಿ ಕೊನೆಯಲ್ಲ ಅವನು ಮನೆಗೆ ಹೋಗುವಾಗ ಅಂಥಾ ಶಿಕ್ಷೆಯನ್ನು ಅನುಭವಿಸುವುದು ಕಠಿಣವೆಂಬ ಒಂದು ಕನಿಕರ ಭಾವನೆಯಿಂದ ಕಡಮೆ ಮಾಡತಕ್ಕ ಸಂಭವಗಳೂ ಬರುತ್ತವೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ದೊಡ್ಡ ಅಧಿಕಾರಿಗಳು ಲಂಚಕ್ಕೆ ಕೈಹಾಕಿದರೆ ಅಂಥವರನ್ನು ಕೆಲಸದಲ್ಲಿಟ್ಟುಕೊಳ್ಳುವುದರಿಂದ ಮತ್ತೂ ದೇಶಕ್ಕೆ ತೊಂದರೆಯಾಗುತ್ತದೆಂದು ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಹನುಮಂತಯ್ಯ.—ಆ ತರಹ ತಪ್ಪುಗಳು ಯಾರ ಮೇಲೆ ರುಜುವಾತು ಆಗುತ್ತದೆಯೋ ಅಂಥವರನ್ನು ಕೆಲಸದಲ್ಲಿ ಇಟ್ಟುಕೊಳ್ಳುವುದಿಲ್ಲ. ಆ ರೀತಿ ಕಾನೂನಿನಲ್ಲಿಯೂ ನಿಬಂಧನೆ ಇದೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಲಂಚ ತೆಗೆದುಕೊಳ್ಳುವ ಅಧಿಕಾರಿಗಳನ್ನು ನಾವು ಹಿಡಿದುಕೊಟ್ಟರೆ ತಾವು ಅವರನ್ನು ಕೆಲಸದಿಂದ ರಿಟೈರ್ ಆಗುವಂತೆ ಮಾಡುತ್ತೀರಾ ?

ಶ್ರೀ ಕೆ. ಹನುಮಂತಯ್ಯ.—ಮಾಡುತ್ತೇವೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಲಂಚ ಕೊಟ್ಟವರಿಗೂ ಶಿಕ್ಷೆ ಮಾಡಬೇಕೆಂದು ಹೇಳುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಹನುಮಂತಯ್ಯ.—ಅಂಥ ಸಂದರ್ಭಗಳಿದ್ದರೆ ನನ್ನ ಗಮನಕ್ಕೆ ತಂದುಕೊಡಿ, ನೋಡೋಣ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಲಂಚಕೊಟ್ಟವರಿಗೆ ಶಿಕ್ಷೆ ವಿಧಿಸಲಾಗುತ್ತದೆ ಎಂದು ಹೇಳಿದರೆ ಲಂಚ ಕೊಟ್ಟವರು ನಾವು ಲಂಚ ಕೊಟ್ಟೆವು ಎಂದು ಹೇಳುವುದುಂಟೇ ?

(ಉತ್ತರವಿಲ್ಲ.)

ಶ್ರೀ ಎಂ. ಮಾದಯ್ಯ.—ತಾವು (ಎ) ಪ್ರಶ್ನೆಗೆ ಒದಗಿಸಿರುವ ಉತ್ತರದಲ್ಲಿ ತಿಳಿಸಿರುವ 108 ಜನರಲ್ಲಿ (ಬಿ) ಪ್ರಶ್ನೆಯಲ್ಲಿ ಸೂಚಿಸಿರತಕ್ಕ 36 ಜನರ ಪೈಕಿ 15 ಜನಗಳು ಅದರಲ್ಲಿ ಸೇರಿದ್ದಾರೆಯೇ ?

ಶ್ರೀ ಕೆ. ಹನುಮಂತಯ್ಯ.—ತಾವು ಕೇಳತಕ್ಕ ಪ್ರಶ್ನೆ ಏನು ಎಂಬುದು ನನಗೆ ಅರ್ಥವಾಗಲಿಲ್ಲ.

ಶ್ರೀ ಎಂ. ಮಾದಯ್ಯ.—ಇಲ್ಲಿ 108 ಜನ ಸೂಪರ್-ಅನ್ಯುಯೇಷನ್ ವಯಸ್ಸಾಯತೆಂದು ರಿಟೈರ್‌ಮಾಡಿರುವುದಾಗಿ ಹೇಳಿದ್ದೀರಲ್ಲಾ, ಇವರಲ್ಲಿ ಎಷ್ಟು ಜನ ವಯಸ್ಸನ್ನು ಬದಲಾಯಿಸಿದವರು ಸೇರಿದ್ದಾರೆ ?

ಶ್ರೀ ಕೆ. ಹನುಮಂತಯ್ಯ.—ಹಾಗೆ ಬದಲಾವಣೆ ಆಗಿರುವವರ ಹೆಸರುಗಳೂ ಸೇರಿವೆ

ಶ್ರೀ ಎಂ. ಮಾದಯ್ಯ.—ಅವರೆಷ್ಟು ಜನ ? ಸೂಪರ್-ಅನ್ಯುಯೇಷನ್ ತಾರೀಖನ್ನು ಗೊತ್ತು ಮಾಡಲಾಗಿದ್ದರೂ ಕೂಡ ಹೀಗೆ extension of service ಕೊಟ್ಟಿದ್ದೇವೆಂದು ಹೇಳುವುದಕ್ಕೆ ಕಾರಣವೇನು ?

Sri A. G. RAMACHANDRA RAO (Minister for Law and Education).—Out of 36 (including 15 cases) where the age of superannuation had passed, the extensions which they got as a matter of course are treated as extensions here.

Mr. SPEAKER.—Question Nos. 337 and 622 may be taken up together.

Power Supply to Irrigation pump-sets.

Q.—337. Sri A. V. NARASIMHA REDDY (Bangalore South).—

Will the Government be pleased to state :—

(*a*) the number of pump-sets supplied with power from April 1952 to January 1953 in Bangalore District (talukwar information may kindly be furnished);

(*b*) the number of estimated works pending execution ?

A.—Sri K. HANUMANTHAIYA (Chief Minister).—

(*a*)—

Bangalore District Taluks	*Irrigation Pumping Sets serviced.*
Anekal ..	16
Hoskote ..	16
Devanhalli ..	56
Bangalore North ..	33
Bangalore South ..	20
Doddaballapur ..	4
Kanakapura ..	10
Channapatna ..	4
Nelamangala ..	2
Ramanagaram ..	5
Magadi ..	1